ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

# ಸಭಾತ್ಯಾಗದ ನಡುವೆ ಎಪಿಎಂಸಿ ಪಾಸ್

## ರೈತರ ಜುಟ್ಟು ಖಾಸಗಿಗೆ ನೀಡುವ ಹುನ್ನಾರ ಎಂದು ಪ್ರತಿಪಕ್ಷ ಆರೋಪ

**ಬೆಂಗಳೂರು:** ಕಾಂಗ್ರೆಸ್-ಜೆಡಿಎಸ್ ಸದಸ್ಯರ ವಿರೋಧ, ಸಭಾತ್ಯಾಗದ ನಡುವೆ ವಿವಾದಿತ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) (ಎಪಿಎಂಸಿ ತಿದ್ದುಪಡಿ) ವಿಧೇಯಕವನ್ನು ವಿಧಾನಸಭೆಯಲ್ಲಿ ಧ್ವನಿಮತದ ಮೂಲಕ ಅನುಮೋದನೆ ಲಭಿಸಿತು.

ಶನಿವಾರ ಭೋಜನ ವಿರಾಮದ ಬಳಿಕ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ವಿಧೇಯಕ ಮಂಡಿಸಿದರು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ''ಎಪಿಎಂಸಿ ರಾಜ್ಯದ ವಿಷಯ. ರೈತರ ಒತ್ತಾಯದಿಂದ ಮಾಡಿದ ತಿದ್ದುಪಡಿಯಲ್ಲ, ಕೇಂದ್ರ ಗೃಹ ಸಚಿವ ಅಮಿತ್ ಶಾ ಕಚೇರಿಯಿಂದ ಬಂದ ಪತ್ರದ ಆಧಾರದ ಮೇಲೆ ಈ ತಿದ್ದುಪಡಿ ತರಲಾಗಿದೆ,'' ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

''ಕೇಂದ್ರ ಸರಕಾರದ ಮೇಲೆ ಕಾರ್ಪೊರೇಟ್ ವಲಯ, ಎಂಎನ್‌ಸಿಗಳು ಒತ್ತಡ ಹೇರಿದ್ದಾರೆ. ಆದುದರಿಂದ, ರಾಜ್ಯ ಸರಕಾರಗಳಿಗೆ ಅವರು ನಿರ್ದೇಶನ ನೀಡುತ್ತಿದ್ದಾರೆ. ಇದು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತಿದೆ. ನೀವು ಯಾಕೆ ಒಪ್ಪಿಗೆ ನೀಡುತ್ತೀರಾ,'' ಎಂದು ಅವರು ಪ್ರಶ್ನಿಸಿದರು.

''ರಾಜ್ಯದ ವಿಷಯಗಳಲ್ಲಿ ಮಧ್ಯಪ್ರವೇಶಿಸಲು ಕೇಂದ್ರಕ್ಕೆ ಅಧಿಕಾರ ಕೊಟ್ಟಿದ್ದು ಯಾರು? 2017ರಲ್ಲಿ ನಾವು ಈ ವಿಧೇಯಕವನ್ನು ವಿರೋಧಿಸಿದ್ದೇವೆ. ಡಿಕ್ಟೇಟರ್ ಶಿಪ್ ನಡೆಯುತ್ತಿದ್ದೆಯೆ? ಜಿಎಸ್‌ಟಿ ಮಾರಾಟ ತೆರಿಗೆ ರಾಜ್ಯಕ್ಕೆ ಸೇರಿದ್ದು, ಕೇಂದ್ರದವರು ಪರಿಹಾರ ಕೊಡುತ್ತೇವೆ ಎಂದಾ ನಾವು ಒಪ್ಪಿದೆವು. ಇವತ್ತು ಪರಿಸ್ಥಿತಿ ಏನಾಗಿದೆ,'' ಎಂದು ಸಿದ್ದರಾಮಯ್ಯ ಹೇಳಿದರು.

ಈ ವಿಧೇಯಕದಿಂದ ಎಪಿಎಂಸಿಗಳು ಮುಚ್ಚಿಹೋಗುತ್ತವೆ. ಬಂಡವಾಳಶಾಹಿಗಳು ಅವರದ್ದೇ ಮಾರುಕಟ್ಟೆಗಳನ್ನು ಮಾಡಿಕೊಳ್ಳುತ್ತೇವೆ. ಆಗ ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತದೆಯೇ? ರೈತರ ಜುಟ್ಟು ಖಾಸಗಿಯವರಿಗೆ ಯಾಕೆ ಕೊಡುತ್ತೀರಾ? ಎಂದು ಸಿದ್ದರಾಮಯ್ಯ ಕಿಡಿಗಾರಿದರು.

''2015ರಲ್ಲಿ ಎಪಿಎಂಸಿಗಳಲ್ಲಿ ಇ-ಟ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದೆವು. ನಮ್ಮ ಯೋಜನೆಯನ್ನು ಕೇಂದ್ರ ಸರಕಾರ ಮೆಚ್ಚಿ, ಇಡೀ ದೇಶಕ್ಕೆ ವಿಸ್ತರಿಸಿತು. ರೈತರಿಗೆ ನೆರವು ನೀಡಲೇಬೇಕು. ಅನ್ನೋ ಮನಸ್ಸು ಇದ್ದರೆ ಸ್ವಾಮಿನಾಥನ್ ವರದಿಯನ್ನು ಜಾರಿಗೆ ತನ್ನಿ. ಇದನ್ನು ಕೈ ಬಿಡಿ,'' ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ಎಚ್.ಡಿ.ಕುಮಾರಸ್ವಾಮಿ, ''ರಾಜ್ಯ ಸರಕಾರ ಜಿಎಸ್‌ಟಿ ಒಪ್ಪಿಗೆ ನೀಡುವ ವೇಳೆ ನಮ್ಮ ಕುತ್ತಿಗೆ ಅವರ ಕೈಗೆ ನೀಡಿ, ಹಗ್ಗನೂ ಕೊಟ್ಟು, ನೇಣು ಹಾಕಿಸಿಕೊಳ್ಳುವಂತಾಗಿದೆ ಎಂದು ಹೇಳಿದ್ದೆ. ಈ ತಿದ್ದುಪಡಿ ವಿಧೇಯಕವು ರಾಜ್ಯ ಸರಕಾರಗಳ ಅಧಿಕಾರ ಮೊಟಕುಗೊಳಿಸುವುದಾಗಿದೆ. ರೈತರ ಪಾಲಿಗೆ ಕಂಟಕವಾಗಲಿದೆ. ಬಿಹಾರದಲ್ಲಿ ಎಪಿಎಂಸಿಗಳನ್ನು ರದ್ದು ಮಾಡಿದ ನಂತರ ಅಲ್ಲಿನ ರೈತರು ಹರಿಯಾಣ, ಪಂಜಾಬ್‌ಗೆ ಉತ್ಪನ್ನ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ರೈತರ ಬೆಳೆಗಳ ಪೈಕಿ ಶೇ.6ರಷ್ಟು ಮಾತ್ರ ಎಂಎಸ್‌ಪಿ ಆಧಾರದಲ್ಲಿ ಖರೀದಿ ಮಾಡುತ್ತೇವೆ. ಉಳಿದ ಶೇ.94ರಷ್ಟು ಬೆಳೆ ಹೊರಗೆ ಮಾರಾಟ ಮಾಡುವ ಪರಿಸ್ಥಿತಿ ಇದೆ,'' ಎಂದು ಅವರು ಹೇಳಿದರು.

''ಎಪಿಎಂಸಿಗಳಲ್ಲಿ ಸೆಸ್ ಸಂಗ್ರಹ ಕಡಿಮೆಯಾಗುತ್ತದೆ. ಮೂಲ ಸೌಕರ್ಯ ವೃದ್ಧಿಸಲು ಸಾಧ್ಯವಿಲ್ಲ, ಅಲ್ಲಿನ ಸಿಬ್ಬಂದಿಗಳಿಗೆ ಸಂಬಳ ಕೊಡಲು ಸಾಧ್ಯವಾಗುವುದಿಲ್ಲ, ರೈತನು ತಾನು ಬೆಳೆ ಬೆಳೆಯುವ ಮುನ್ನ ಕಾರ್ಪೊರೇಟ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ, ದುಡುಕಿ ತೀರ್ಮಾನ ಮಾಡಬೇಡಿ,'' ಎಂದು ಅವರು ಹೇಳಿದರು. ಬಂಡೆಪ್ಪ ಕಾಶೆಂಪೂರ್, ''ಕೇಂದ್ರ ಸರಕಾರದ ಅಧಿಕಾರಿಗಳು, ಕೃಷಿ ಸಚಿವರು ಮಾದರಿ ಎಪಿಎಂಸಿ ಕಾಯ್ದೆಗೆ ಒಪ್ಪಿಗೆ ಪಡೆದು ಕಳುಹಿಸಿಕೊಡಿ ಎಂದು ನಮಗೆ ಕೇಳಿದರು. ಆದರೆ, ರಾಜ್ಯದ ಹಿತದೃಷ್ಟಿಯಿಂದ ನಾವು ಅವರಿಗೆ ಸ್ಪಷ್ಟೀಕರಣ ಕೊಟ್ಟಿದ್ದೇವೆಯೆ ಹೊರತು, ಅಂಗೀಕಾರ ಪಡೆಯಲು ಹೋಗಿಲ್ಲ,''ಎಂದರು.



ಎಪಿಎಂಸಿ ಕಾಯಿದೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಅನ್ನದಾತ ಪರ ಮಾಸ್ಕ್ ಧರಿಸಿದ್ದರು.

### ಚುನಾವಣೆಯಲ್ಲಿ ವ್ಯಾಪಾರ ಮಾಡಿಯೇ ಇಲ್ಲಿ ಬಂದಿರುವೆ!

**ಬೆಂಗಳೂರು:** ''ನಾನು ಚುನಾವಣೆಯಲ್ಲಿ ವ್ಯಾಪಾರ ಮಾಡಿಯೇ ಇಲ್ಲಿಗೆ ಬಂದಿರುವೆ. ನನ್ನಂತೆ ಎಲ್ಲರೂ ಕೂಡ. ಇಲ್ಲದಿದ್ದಲ್ಲಿ ಚುನಾವಣೆ ಗೆಲ್ಲಲಾಗದು''. ಇದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಶನಿವಾರ ಮೇಲ್ಮನೆ ಕಲಾಪದ ವೇಳೆ ನೀಡಿದ ಅಚ್ಚರಿ ಹೇಳಿಕೆ. ''ಈಗಿನ ಚುನಾವಣೆ ಬಹಳಷ್ಟು ಹದಗೆಟ್ಟಿದೆ. ಇದು ಪಂಚಾಯಿತಿ ಚುನಾವಣೆಯನ್ನೂ ಬಿಟ್ಟಿಲ್ಲ. ಶಾಸನಸಭೆಯಲ್ಲಿ ಪಕ್ಷದ ಸಿದ್ಧಾಂತ ಆಧರಿಸಿ ಜಗಳ ಆಡಿದ್ದೇವೆ. ಆದರೆ, ಜಾತಿ ಹಾಗೂ ಹಣ ಮೀರಿ ಚುನಾವಣೆ ನಡೆಯುವ ವಾತಾವರಣ ಮೂಡುವ ಅಗತ್ಯ ಇದೆ'' ಎಂದರು.

**ಮೀಸಲು ಪುನರಾವರ್ತನೆಗೆ ವರ್ಷ ಬೇಕು:** ''ಹಾಲಿ ಪಂಚಾಯಿತಿಗಳಲ್ಲಿ ಹತ್ತು ವರ್ಷಕ್ಕೊಮ್ಮೆ ಮೀಸಲು ನಿಗದಿ ಮಾಡಲಾಗುತ್ತಿದೆ. ಇದರಿಂದ ನಾನಾ ವರ್ಗಗಳಿಗೆ ಅನ್ಯಾಯವಾಗುತ್ತಿದೆ ಎಂಬ ಆಕ್ಷೇಪ ಇದೆ. ಇದನ್ನು ಮುಂದುವರಿಸಿದರೆ ಒಂದು ವರ್ಗಕ್ಕೆ ಮೀಸಲು ನಿಗದಿ ಮತ್ತೆ ಸಿಗಲು 10 ವರ್ಷ ಬೇಕು. ಹೀಗಾಗಿ ಮೀಸಲು ಅವಧಿಯನ್ನು ಐದು ವರ್ಷಕ್ಕೆ ಹಾಗೂ ಅಧ್ಯಕ್ಷ-ಉಪಾಧ್ಯಕ್ಷರ ಸ್ಥಾನದ ಮೀಸಲನ್ನು ಎರಡೂವರೆ ವರ್ಷಕ್ಕೆ ಸೀಮಿತ ಮಾಡಲಾಗುವುದು'' ಎಂದು ಸಚಿವರು ವಿವರಿಸಿದರು.

● ರಾಜ್ಯದಲ್ಲಿ 162 ಎಪಿಎಂಸಿಗಳಿದ್ದು, ರೈತರು ಬೆಳೆದ ಬೆಳೆಗಳನ್ನು ಎಪಿಎಂಸಿ ಒಳಗಡೆ ಮಾರಾಟ ಮಾಡುವ ಕಾನೂನು ಜಾರಿಯಲ್ಲಿದೆ. ಅದಕ್ಕೆ ತಿದ್ದುಪಡಿ ತಂದು ಎಪಿಎಂಸಿ ಒಳಗಡೆ ಹಾಗೂ ಹೊರಗೆ, ಹೊಲದಲ್ಲಿ ಬೆಳೆ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ರೈತರು ಬೆಳೆದಂತಹ ಬೆಳೆ ಅವರ ಹಕ್ಕು. ಎಲ್ಲಿ ಬೇಕಾದರೂ ಮಾರಾಟ ಅವರ ಹಕ್ಕು. ಎಪಿಎಂಸಿ ಹೊರಗಡೆ ಉತ್ಪನ್ನ ಮಾರಾಟ ಮಾಡಿದರೆ ಅವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ, ದಂಡ ಹಾಕುವ ನಿಯಮವನ್ನು ಕೈ ಬಿಡುತ್ತಿದ್ದೇವೆ. ಎಲ್ಲ ಜತೆ ಚರ್ಚಿಸಿ ಈ ತಿದ್ದುಪಡಿ ತರಲಾಗಿದೆ. ರೈತರಿಗೆ ಇದರಿಂದ ಯಾವುದೆ ಅನ್ಯಾಯವಾಗುವುದಿಲ್ಲ,

**-ಎಸ್.ಟಿ.ಸೋಮಶೇಖರ್** ಸಹಕಾರ ಸಚಿವ